**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003**

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18, ದಿನಾಂಕ: 17.01.2018**
**10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ

ಅರಣ್ಯ ಇಲಾಖೆಯಲ್ಲಿ 10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ (=4 ಉಳಿಕೆ ಮೂಲ ವೃಂದ + 6 ಹೈದರಾಬಾದ್ ಕರ್ನಾಟಕ ವೃಂದ) ಹುದ್ದೆಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 179 FEG 2015 ದಿನಾಂಕ: 30.11.2017ರನ್ವಯ ಅಧಿಸೂಚಿಸಿದ The Karnataka Forest Department Services (Recruitment of Meritorious Sports persons in the category of Deputy Range Forest Officer, Forest Guard and Forest Watcher) (Special) Rules, 2017ರನ್ವಯ ಅರಣ್ಯ ಇಲಾಖೆಯ ಅಧಿಸೂಚನೆ ಸಂಖ್ಯೆ: ಬಿ9/ ನೇಮಕಾತಿ/ ಸ್ಪೋರ್ಟ್ಸ್/ ವಿವ-3/ 2017-18, ದಿನಾಂಕ:17.01.2018ರಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸ್ಪೋರ್ಟ್ಸ್ ಕೋಟಾದಡಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು 'ವಿಶೇಷ ನೇಮಕಾತಿ ಸಮಿತಿ'ಯು ದಿನಾಂಕ:02.04.2018ರಂದು ಸಭೆಯನ್ನು ನಡೆಸಿದ್ದು, "ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗೆ ಸಂಬಂಧಿಸಿದಂತೆ, ಹೈದರಾಬಾದ್-ಕರ್ನಾಟಕ ಪ್ರದೇಶ ಹಾಗೂ ಉಳಿಕೆ ಮೂಲವೃಂದ ನೇಮಕ ಮಾಡಲು ವಿವಿಧ ಕ್ರೀಡೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಅಧಿಸೂಚನೆಯಲ್ಲಿ ನಿಗದಿಪಡಿಸಿದ ಮಾನದಂಡಗಳಂತೆ ಹೈದರಾಬಾದ್-ಕರ್ನಾಟಕ ಹಾಗೂ ಉಳಿಕೆ ಮೂಲವೃಂದಕ್ಕೆ ಯಾವುದೇ ಅರ್ಹ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ ಎಂಬ ಅಂಶವನ್ನು ಚರ್ಚಿಸಿ ತೀರ್ಮಾನಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ದಿನಾಂಕ:14.05.2018ರ ಪ್ರಕಟಣೆಯಲ್ಲಿ ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಸ್ಪೋರ್ಟ್ಸ್ ಕೋಟಾದಡಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಅಧಿಸೂಚನೆಯ ಷರತ್ತುಗಳನ್ವಯ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿರುವುದನ್ನು ಪ್ರಶ್ನಿಸಿ ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಕ್ರೀಡೆಗಳನ್ನು ಉಳಿಕೆ ಮೂಲ ವೃಂದಕ್ಕೆ ವರ್ಗಾಯಿಸುವಂತೆ ಕೋರಿ ಅಭ್ಯರ್ಥಿಯೊಬ್ಬರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು, ಇಲ್ಲಿ ಅರ್ಜಿ ಸಂಖ್ಯೆ:6598/2018ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ:24.04.2019ರಂದು ಅಂತಿಮ ಆದೇಶವಾಗಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ಅಭ್ಯರ್ಥಿಯು ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 6265/2021 (ಎಸ್-ಕೆಎಸ್‌ಎಟಿ) C/W ಸರ್ಕಾರವು ದಾಖಲಿಸಿದ ರಿಟ್ ಅರ್ಜಿ 10785/2020 (ಎಸ್-ಕೆಎಸ್‌ಎಟಿ) ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:07.07.2021ರಂದು ಅಂತಿಮ ಆದೇಶ ಹೊರಡಿಸಿರುತ್ತದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ದಿನಾಂಕ:07.07.2021ರಂದು ನೀಡಿರುವ ಈ ಮೇಲಿನ ಅಂತಿಮ ಆದೇಶದ ಅನುಪಾಲನೆಯ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಅಪಜೀ 49 ಅಅಸೇ 2021, ದಿನಾಂಕ:22.08.2022ರಂದು ಅಧಿಸೂಚನೆ ಸಂಖ್ಯೆ:ಬಿ9/ ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18, ದಿನಾಂಕ:17.01.2018ರ ಅಧಿಸೂಚನೆಯನ್ವಯ ಸ್ಪೋರ್ಟ್ಸ್ ಕೋಟಾದಡಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗೆ ಅಧಿಸೂಚಿಸಿದ 10 ಹುದ್ದೆಗಳಿಗೆ ಮಾತ್ರ ಈಗಾಗಲೇ ಸ್ವೀಕೃತವಾಗಿರುವ ಅರ್ಜಿಗಳನ್ನು ಪರಿಶೀಲಿಸಿ, ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ದಿನಾಂಕ:07.07.2021ರಂದು ನೀಡಿರುವ ಅಂತಿಮ ಆದೇಶ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಅಪಜೀ 49 ಅಅಸೇ 2021, ದಿನಾಂಕ:22.08.2022ರ ಅನುಮತಿಯಂತೆ ಈ ಕೆಳಗಿನ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ದಿನಾಂಕ:07.07.2021ರಂದು ನೀಡಿರುವ ಅಂತಿಮ ಆದೇಶದ ಅನುಪಾಲನೆಯ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಅಪಜೀ 49 ಅಅಸೇ 2021, ದಿನಾಂಕ:22.08.2022ರಂದು *"ಅಧಿಸೂಚನೆ ಸಂಖ್ಯೆ:ಬಿ9/ ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18, ದಿನಾಂಕ:17.01.2018ರ ಅಧಿಸೂಚನೆಯನ್ವಯ* ***ಸ್ಪೋರ್ಟ್ಸ್ ಕೋಟಾದಡಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗೆ ಅಧಿಸೂಚಿಸಿದ 10 ಹುದ್ದೆಗಳಿಗೆ*** *ಈಗಾಗಲೇ ಸ್ವೀಕೃತವಾಗಿರುವ 88 ಅರ್ಜಿಗಳನ್ನು ಮಾತ್ರ ಪರಿಗಣಿಸಿ ತಯಾರಿಸಿದ*

**ತಾತ್ಕಾಲಿಕ ಆಯ್ಕೆಪಟ್ಟಿ**

| Sl. No. | Appln ID | Regn ID | Full Name of the Applicant | Date of Birth | Gender | Category Claimed | H K | Non-H K | As per Rule 4(5)(b) r/w Notification Condition No. 2 - Weightage | Kannada Medium Candidate | Rural Candidate | Project Displaced Person | Ex-Military Person |
|---|---|---|---|---|---|---|---|---|---|---|---|---|---|
| 1 | 7000038 | 1000213 | HARSHITH S | 05-11-1993 | MALE | GM | No | Yes | 37 | No | No | No | No |
| 2 | 7000795 | 1004174 | SHASHANK J RAI | 19-03-1993 | MALE | GM | No | Yes | 33 | No | No | No | No |
| 3 | 7000461 | 1002479 | JEEVITHA SACHIDANANDA | 27-03-1992 | FEMALE | SC | No | Yes | 24 | No | No | No | No |
| 4 | 7000439 | 1000377 | AJITH KUMAR | 12-05-1994 | MALE | 2A | No | Yes | 20 | No | No | No | No |
| 5 | 7000321 | 1001813 | JANARDHAN T S | 31-08-1993 | MALE | 2A | No | Yes | 17 | No | No | No | No |

ಈ ಮೇಲಿನ ತಾತ್ಕಾಲಿಕ ಆಯ್ಕೆಪಟ್ಟಿಯ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ, ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಮಾತ್ರ ಈ ಕೆಳಕಂಡ ನಮೂನೆಯಲ್ಲಿ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಈ ಕಛೇರಿಯ ಇ-ಮೇಲ್ "**pccfrecruitment@gmail.com**"ಗೆ **ದಿನಾಂಕ: 02.06.2023ರೊಳಗೆ** ಸಲ್ಲಿಸತಕ್ಕದ್ದು.

| **ಕ್ರ. ಸಂ.** | **ಅಭ್ಯರ್ಥಿಯ ಪೂರ್ಣ ಹೆಸರು** | **ನೋಂದಣಿ ಸಂಖ್ಯೆ** | **ಅರ್ಜಿ ಸಂಖ್ಯೆ** | **ಜನ್ಮ ದಿನಾಂಕ** | **ಆಕ್ಷೇಪಣೆ** *(ಸ್ಪಷ್ಟ ರೀತಿಯಲ್ಲಿ)* |
|---|---|---|---|---|---|
| | | | | | |

ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ, ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ಇತರೆ ಇ-ಮೇಲ್ ಮೂಲಕ ಸ್ವೀಕೃತವಾದ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

*[**ಟಿಪ್ಪಣಿ:** ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಿರುವ ಮಾಹಿತಿಯನ್ನು ಮಾತ್ರ ಆಧರಿಸಿ ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ತಯಾರಿಸಲಾಗಿದ್ದು, ಅಭ್ಯರ್ಥಿಗಳು ಸಲ್ಲಿಸಿರುವ ಮಾಹಿತಿ/ದಾಖಲೆ/ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಾಧಿಕಾರಿಗಳಿಂದ ನೈಜತೆಯ ದೃಢೀಕರಣದ ಷರತ್ತಿಗೆ ಒಳಪಟ್ಟಿರುತ್ತದೆ.]*

RG Singh
22.5.23

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 22.05.2023